ಸಣ್ಣಕತೆ ಹಾಗಲ್ಲ. ಅದು ತುಂಬ ಕಡಿಮೆ ಹೇಳಿ ಹೆಚ್ಚಿನದನ್ನು ಸೂಚಿಸಬೇಕು. ಈ ಉದ್ದೇಶಕ್ಕಾಗಿಯೇ ಸಣ್ಣಕತೆಯಲ್ಲಿ ಸಂದರ್ಭಕ್ಕೆ ತಕ್ಕಂತೆ ಭಾಷೆ, ನಿರೂಪಣೆ, ದೃಷ್ಟಿಕೋನ, ಪಾತ್ರವೈಶಿಷ್ಟ್ಯ, ನಾಟಕೀಯತೆ, ಸಂಭಾಷಣೆ, ಕಾಲದ ಸಂಯೋಜನೆ, ಸನ್ನಿವೇಶ, ಶೈಲಿ, ಪ್ರತಿಮಾವಿಧಾನ, ಸಾಂಕೇತಿಕತೆ, ವ್ಯಂಗ್ಯ, ಮುಂತಾದವುಗಳ ಬಳಕೆಯಾಗುತ್ತದೆ. ಕತೆ ತನ್ನ ಪಾತ್ರಗಳನ್ನು ಸ್ಪಷ್ಟಪಡಿಸುವುದು ತನ್ನೊಳಗಿನ ಕ್ರಿಯೆಯ ಮೂಲಕ; ಆ ಕ್ರಿಯೆಯೇ ಪಾತ್ರಗಳನ್ನೂ ನಿಯಂತ್ರಿಸುತ್ತಿರುತ್ತದೆ. ಅದರ ಫಲವಾಗಿ ನಿರೂಪಿಸಲ್ಪಟ್ಟ ಅನುಭವದಿಂದ ಅರ್ಥವೊಂದು ಹುಟ್ಟಿಕೊಳ್ಳುತ್ತದೆ.

ಸಣ್ಣಕತೆಗೆ ಏಕಮಾತ್ರ ರೂಪವೆಂಬುದಿಲ್ಲ; ಅದಕ್ಕೆ ಸ್ಪಂದಿಸಬಲ್ಲ ಏಕಮಾತ್ರ ವಿಧಾನವೂ ಇಲ್ಲ. ನನ್ನ ದೃಷ್ಟಿಯಲ್ಲಿ ಕತೆಯನ್ನು ಓದುವುದೇ ಒಂದು ಸೃಜನಶೀಲ ಕ್ರಿಯೆ. ಅದರಲ್ಲಿ ಓದುಗನಾದವನು ಕ್ರಿಯಾಶೀಲವಾಗಿ ಭಾಗವಹಿಸಬೇಕು. ಹಾಗೆ ಭಾಗವಹಿಸುವುದರಿಂದ ಒಂದು ಸಣ್ಣಕತೆ ನಾವು ಏನನ್ನು ನಿರೀಕ್ಷಿಸುತ್ತೇವೋ ಅದನ್ನಷ್ಟೇ ಅರ್ಥೈಸುವುದಿಲ್ಲ. ಕತೆಗಾರ ತನ್ನ ಓದುಗರನ್ನು ಒಳಗೊಳ್ಳುವುದಕ್ಕಾಗಿ ತನ್ನದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ಶಬ್ದಗಳನ್ನು ಜೋಡಿಸಿರುತ್ತಾನೆ; ಓದುಗರ ಸ್ಪಂದನೆಯನ್ನು ರೂಪಿಸುವುದಕ್ಕಾಗಿ ಹಾಗೂ ಸ್ಪಂದಿಸುವಂತೆ ಅವರಿಗೆ ಮಾರ್ಗದರ್ಶನ ಮಾಡುವುದಕ್ಕಾಗಿ ಪರಿಚಿತವೂ ಅಪರಿಚಿತವೂ ಆದ ಬಗೆಬಗೆಯ ತಂತ್ರಗಳನ್ನು ಉಪಯೋಗಿಸಿರುತ್ತಾನೆ. ಕತೆಯೂ ಕೂಡ, ಬರವಣಿಗೆಯ ಪ್ರಕ್ರಿಯೆಯಲ್ಲೇ ತನ್ನ ತಂತ್ರವನ್ನು ತಾನೇ ರೂಪಿಸಿಕೊಂಡಿರುತ್ತದೆ.

ಪ್ರತಿಯೊಬ್ಬ ಕತೆಗಾರನೂ ತಾನು ಕತೆ ಬರೆಯುವ ಹಂತದಲ್ಲೇ, ಪ್ರಜ್ಞಾಪೂರ್ವಕವಾಗಿ ಹೇಗೋ ಹಾಗೆ ಅಪ್ರಜ್ಞಾಪೂರ್ವಕವಾಗಿ ಕೂಡ, ಈ ಕೆಲವು ಪ್ರಶ್ನೆಗಳನ್ನು ಸ್ವತಃ ಕೇಳಿಕೊಂಡು ಅವುಗಳಿಗೆ ಉತ್ತರಗಳನ್ನು ಕಂಡುಕೊಳ್ಳುತ್ತಿರುತ್ತಾನೆ: 1. ಕತೆಯಲ್ಲಿ ಏನಾಗುತ್ತದೆ? 2. ಕತೆ ಎಲ್ಲಿ, ಯಾವಾಗ ನಡೆಯುತ್ತದೆ? 3. ಕತೆ ಯಾವುದರ ಬಗೆಗೆ ಇದೆ? 4. ಕತೆ ಹೇಳುತ್ತಿರುವವರು ಯಾರು? 5. ಕತೆ ಯಾವ ರೂಪ ಪಡೆದುಕೊಳ್ಳುತ್ತಿದೆ? 6. ಕತೆಯಲ್ಲಿ ಕೇಂದ್ರ ಬಿಂದುವೊಂದು ಇದೆಯೆ?

ಕತೆಗಾರ ಬರೆಯುವುದಕ್ಕೆ ಅಥವಾ ಕಂಪ್ಯೂಟರಿನಲ್ಲಿ ಟೈಪು ಮಾಡುವುದಕ್ಕೆ ಕುಳಿತಾಗ ಅವನು ಬಿಳಿಯ ಜಾಗವನ್ನು ಕಪ್ಪು ಅಕ್ಷರಗಳಿಂದ ತುಂಬಬೇಕು, ಅಲ್ಲವೆ? ನಾನು ಬರೆಯಬೇಕೆಂದುಕೊಂಡ ಕತೆಯ ಪ್ರಮುಖ ರೂಪರೇಖೆಗಳು ಒಡಮೂಡುವವರೆಗೂ ಸುಮ್ಮನೆ ಏನೇನನ್ನೋ ಬರೆಯುತ್ತ ಹೋಗುತ್ತೇನೆ. ಆಮೇಲೆ ನನಗೊಂದು ಚಿತ್ರ ಹೊಳೆದಂತಾಗುತ್ತದೆ. ನಾನು ಬರೆಯುವಾಗ ಅಥವಾ ಕತೆಯ ಒಂದು ಕರಡನ್ನು ರಚಿಸುವಾಗ ಓದುಗರ ಮನಸ್ಸನ್ನು ಸೆಳೆಯಬಲ್ಲ ಆಕರ್ಷಕ ವಾಕ್ಯಗಳಿಗಾಗಿ ಹಂಬಲಿಸುವುದಿಲ್ಲ. ಅದಕ್ಕೆ ಪ್ರತಿಯಾಗಿ 'ಅಲಮೇಲು' ಎಂಬ ಪಾತ್ರಕ್ಕೆ ಏನಾಯಿತು ಅಥವಾ ಏನಾಗುತ್ತಿದೆ ಎಂದು ಬರೆಯಲು ಪ್ರಯತ್ನಿಸುತ್ತೇನೆ. ನನಗೆ ತೀರ ಮುಖ್ಯವೆನಿಸುವುದು ಕತೆಯ ವಿನ್ಯಾಸ. ಅಂದರೆ ನಿರೂಪಣೆಯಲ್ಲಿ ಅಗತ್ಯವಾದ ಯಾವುದೋ ಕೊಂಡಿ ಮಾಯವಾಗಿದೆ; ತುಂಬಲೇಬೇಕಾದ ಒಂದು ಜಾಗವಿದೆ, ಅದನ್ನು ಹೇಗಾದರೂ ಸರಿ, ತುಂಬಲೇಬೇಕು ಎಂದು ಯಾವುದು ತಿಳಿಸುತ್ತದೆಯೋ ಅದೇ ವಿನ್ಯಾಸ. ನಾನು ಸದಾ ಗಮನಿಸುವುದು ವಿನ್ಯಾಸವನ್ನೇ ಹೊರತು ಕತೆಯ ವಿಕಾಸ ಕ್ರಮವನ್ನಲ್ಲ.

ಕತೆಗಾರ ಯಾವನೇ ಆಗಿರಲಿ, ಅವನು ಬರೆಯುತ್ತಿರುವಾಗ ಏಕಾಂಗಿ. ಅವನು ಬರೆಯುವ